



## ಅಪರೂಪದ ಕಪ್ಪು ಅಣಬೆ

ಶಿಲೀಂಧ್ರ ಜಾತಿಗೆ ಸೇರಿದ ಅಣಬೆಯಲ್ಲಿ ಹೆಚ್ಚಾಗಿ ಬಿಳಿ ಬಣ್ಣದವೇ ಕಂಡುಬರುತ್ತಿವೆ. ದಟ್ಟಾರಣ್ಯಗಳಲ್ಲಿ ಮಾತ್ರ ಬಣ್ಣ ಬಣ್ಣದ ಅಣಬೆಗಳನ್ನು ಕಾಣಬಹುದು. ಬಹು ಅಪರೂಪ ಎಂಬಂತೆ ಇಲ್ಲೊಂದು ಕಪ್ಪು ಅಣಬೆ ಕಣ್ಣಿಗೆ ಬಿದ್ದಿದೆ ನೋಡಿ. ವಿಶಿಷ್ಟವಾಗಿ ಗೋಚರಿಸಿದ ಈ ಕಪ್ಪು ಬಣ್ಣದ ಅಣಬೆಯ ಚಿತ್ರವನ್ನು ನನ್ನ ವಿದ್ಯಾರ್ಥಿನಿಯೊಬ್ಬರು ಸೆರೆಹಿಡಿದಿದ್ದಾರೆ. ಇದು ಕೊಪ್ರಿನೇಸಿ ಕುಟುಂಬಕ್ಕೆ ಸೇರಿದ್ದು. ಇದನ್ನು 'ಇಂಕಿ ಕ್ಯಾಪ್' ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ.

ಅಪರೂಪದ ಈ ಅಣಬೆ ಪ್ರಭೇದವು ಆರಂಭದಲ್ಲಿ ಬೂದು ಬಣ್ಣದ ಮೇಲ್ಭಾಗದೊಂದಿಗೆ ಶಂಕುವಿನಾಕಾರದ ಕ್ಯಾಪ್‌ಗಳನ್ನು ಹೊಂದಿರುತ್ತದೆ. ನಂತರ ಕ್ಯಾಪ್ ಹೊರಕ್ಕೆ ಚಾಚಿಕೊಂಡು, ಅಂಚುಗಳು ಕಪ್ಪು ಬಣ್ಣಕ್ಕೆ ತಿರುಗಿ ನಂತರ ಹಿಂದಕ್ಕೆ ಮಡಚಿಕೊಳ್ಳುತ್ತವೆ. ಕ್ಯಾಪ್ ಒಡೆಯಲು ಆರಂಭವಾಗಿ ಸ್ವಯಂ ಕರಗಿ, ಶಾಯಿ ದ್ರವ ಉಂಟಾಗುತ್ತದೆ. ಆದ್ದರಿಂದ ಇದನ್ನು 'ಇಂಕಿ ಕ್ಯಾಪ್' ಎಂದು ಕರೆಯಲಾಗುತ್ತದೆ. ಕ್ಯಾಪ್ 38 ಸೆಂ.ಮೀ. ವ್ಯಾಸವನ್ನು ಕಿವಿರುಗಳು, ಕಪ್ಪು ಬೀಜಕಗಳೊಂದಿಗೆ ಹೊಂದಿದ್ದು, ಇದರ ಕಾಂಡವು ಬಿಳಿಯಾಗಿರುತ್ತದೆ.

–ಡಾ. ಮೈತ್ರಿ ಭಟ್, ವಿಟ್ಲ



## ಇದು ಸಕ್ಕರೆ ಬೊಂಬೆ...

ಚಿತ್ರದಲ್ಲಿ ಕಾಣುತ್ತಿರುವುದು ಸಕ್ಕರೆಯಿಂದ ತಯಾರಿಸಿದ ಬೊಂಬೆಗಳು. ಈ ಸಕ್ಕರೆ ಬೊಂಬೆಗಳಿಗೆ ಕರ್ನಾಟಕದ ಈಶಾನ್ಯ ಜಿಲ್ಲೆಗಳಲ್ಲಿ ವಿಶೇಷ ಸ್ಥಾನವಿದೆ. ಸ್ಥಳೀಯವಾಗಿ ಇವುಗಳನ್ನು 'ಆರ್ತಿ' ಎಂದು ಕರೆಯುತ್ತಾರೆ. ಈ ಬೊಂಬೆ ಆಕಾರದ ತಿನಿಸುಗಳು ಯಾವಾಗ ಬೇಕೆಂದರೆ ಆವಾಗ ಸಿಗುವುದಿಲ್ಲ. ಕೇವಲ ಗೌರಿ ಹುಣ್ಣಿಮೆ ಸಮಯದಲ್ಲಿ ಮಾತ್ರ ನೋಡಲು ಸಿಗುತ್ತವೆ. ನನಗೆ ಇವು ಕಂಡದ್ದು ರಾಯಚೂರಿನಲ್ಲಿ. ಇಲ್ಲಿ ಪ್ರತಿ ವರ್ಷ ಗೌರಿ ಹುಣ್ಣಿಮೆಗೆ ಶ್ರೀ ಮಾತೆ ಗೌರಿಗೆ ಆರತಿ ಬೆಳಗುವ ಸಮಯದಲ್ಲಿ ಈ ಸಕ್ಕರೆ ಬೊಂಬೆಗಳನ್ನು ಕೂಡ ದೇವರಿಗೆ ಸಮರ್ಪಿಸುವ ಪದ್ಧತಿ ರೂಢಿಯಲ್ಲಿದೆ. ಅಲ್ಲದೇ, ಈ ಸಮಯದಲ್ಲಿ ಯಾರಾದರೂ ನೆಂಟರು ಮನೆಗೆ ಬರುವಾಗ ಈ ಆರ್ತಿಗಳನ್ನು ಕೊಂಡು ಬರುತ್ತಾರೆ. ಆದ ಕಾರಣ ಗೌರಿ ಹುಣ್ಣಿಮೆಗಿಂತ ಹತ್ತು ದಿನ ಮುಂಚಿತವಾಗಿ ಈ ಸಕ್ಕರೆ ಗೊಂಬೆಗಳ ಮಾರಾಟ ಪ್ರಾರಂಭವಾಗಿ, ಮುಗಿಯುವವರೆಗೂ ಮಾರುಕಟ್ಟೆಯಲ್ಲಿ ಈ ಆರ್ತಿಗಳ ಭರಾಟೆ ಜೋರಾಗಿರುತ್ತದೆ. ಆರ್ತಿ ತಯಾರಕರ ಗುಂಪುಗಳು ಹಬ್ಬ ಪ್ರಾರಂಭವಾಗುತ್ತಿದ್ದಂತೆ ಥರಾವರಿ ಬೊಂಬೆಗಳನ್ನು ಸಿದ್ಧಪಡಿಸಿ ಮಾರಾಟ ಶುರು ಮಾಡಿಕೊಳ್ಳುತ್ತವೆ. ಆ ಸಂದರ್ಭ ಸಂತೆಯಲ್ಲಿ ಸಿಕ್ಕ ದೃಶ್ಯವಿದು.

–ಹನುಮಂತ ಎಸ್.ಕೆ., ರಾಯಚೂರು



## ಹಳೆಯ ಕಾಲದ ಕಲ್ಲು ಬಟ್ಟಲು



ಇವು ಕಲ್ಲು ಬಟ್ಟಲುಗಳು. ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಈ ಬಟ್ಟಲುಗಳಿಗೆ ನೂರಾರು ವರ್ಷಗಳ ಇತಿಹಾಸವಿದೆ. ಹಿಂದಿನ ಕಾಲದಲ್ಲಿ ಮನೆಯಲ್ಲಿ ಬಳಸುತ್ತಿದ್ದ ಪಾತ್ರೆಗಳೆಲ್ಲವೂ ತಾಮ್ರ, ಹಿತ್ತಾಳೆ ಮತ್ತು ಕಂಚಿನಿಂದ ಮಾಡಿರುತ್ತಿದ್ದವು. ಕುಡಿಯುವ ನೀರಿನ ತಂಬಿಗೆ, ಲೋಟ ಮತ್ತು ಪೂಜಾ ಸಾಮಾನುಗಳು ಸಾಮಾನ್ಯವಾಗಿ ತಾಮ್ರದಿಂದ ಮಾಡಲಾಗುತ್ತಿತ್ತು. ಅಡುಗೆ ಮಾಡುವ ಪಾತ್ರೆಗಳು, ಮನೆಬಳಕೆಯ ಇತರ ವಸ್ತುಗಳಾದ ಕೊಡ, ಬಕೆಟ್, ಬಿಂದಿಗೆ ಮುಂತಾದವು ಹಿತ್ತಾಳೆಯಿಂದ ಕೂಡಿರುತ್ತಿದ್ದವು. ಊಟ ಮಾಡುವ ತಟ್ಟೆ, ಲೋಟ ಮುಂತಾದವುಗಳು ಕಂಚಿನಿಂದ ನಿರ್ಮಿತವಾಗಿದ್ದವು.

ಇವುಗಳ ಜೊತೆಗೆ ಕೆಲ ಮನೆಗಳಲ್ಲಿ ಕಲ್ಲಿನಿಂದ ತಯಾರಿಸಿದ ಬಟ್ಟಲಿನಾಕಾರದ ವಿವಿಧ ಬಗೆಯ ಮತ್ತು ವಿವಿಧ ಗಾತ್ರದ ಪಾತ್ರೆಗಳು ಬಳಕೆಯಲ್ಲಿದ್ದವು. ಅವುಗಳನ್ನು ಕಲ್ಲು ಬಟ್ಟಲು ಎಂದೇ ಕರೆಯಲಾಗುತ್ತಿತ್ತು. ಇದರಲ್ಲಿ ಚಿಕ್ಕ ಆಕಾರದ ಕಲ್ಲು ಬಟ್ಟಲನ್ನು ದಿನನಿತ್ಯದ ಊಟಕ್ಕಾಗಿ ಹುಳಿ ಹಾಗೂ ಉಪ್ಪಿನಿಂದ ಕೂಡಿದ ಚಟ್ನಿಗಳನ್ನು ಹಾಕಿಡಲು ಬಳಸುತ್ತಿದ್ದರು. ದೊಡ್ಡ ಗಾತ್ರದ ಕಲ್ಲುಬಟ್ಟಲುಗಳನ್ನು ಮಾವು, ಹುಣಸೆ, ನೆಲ್ಲಿಕಾಯಿ ಮುಂತಾದ ನಾನಾ ಬಗೆಯ ಉಪ್ಪಿನಕಾಯಿಗಳನ್ನು ಮತ್ತು ತೊಕ್ಕುಗಳನ್ನು ಸಂಗ್ರಹಿಸಿ ಇಡಲು ಬಳಸುತ್ತಿದ್ದರು. ಹುಳಿ ಹಾಗೂ ಉಪ್ಪಿನಿಂದ ಕೂಡಿದ ಪದಾರ್ಥಗಳು ಕಿಲುಬು ಬಾರದೆಂಬುದೇ ಇವುಗಳನ್ನು ಬಳಸುವ ಮುಖ್ಯ ಉದ್ದೇಶವಾಗಿತ್ತು. ಸ್ಟೀಲ್, ಪ್ಲಾಸ್ಟಿಕ್‌ನಿಂದ ತಯಾರಿಸಿದ ಪಾತ್ರೆಗಳು ಬಳಕೆಗೆ ಬಂದ ಮೇಲೆ ಕಲ್ಲು ಬಟ್ಟಲುಗಳು ಮರೆಗೆ ಸರಿದಿವೆ.

–ಮುರಲೀಧರ ಕುಲಕರ್ಣಿ, ಬೀದರ್